# ಗಿರಿ ಸಿರಿಯ ಮೋಹಕ ಜಾಲ

ಮಲೆನಾಡು, ಅರೆ ಮಲೆನಾಡು, ಬಯಲು ಪ್ರದೇಶ ಹೀಗೆ ವಿಭಿನ್ನ ಭೌಗೋಳಿಕ ಲಕ್ಷಣ ಹೊಂದಿರುವ ಜಿಲ್ಲೆ ಚಿಕ್ಕಮಗಳೂರು. ಈ ಜಿಲ್ಲೆಯಲ್ಲಿ ಸಾಕಷ್ಟು ಪ್ರವಾಸಿ ಸ್ಥಳಗಳೂ ಇವೆ. ಜಗವೆಲ್ಲ ಧಗೆಯುಗುಳುವಾಗ ತಣ್ಣನೆಯ ಗಾಳಿಯನ್ನೇ ಉಸಿರಾಡುತ್ತಿರುವ ಚಿಕ್ಕಮಗಳೂರಲ್ಲಿ ಬೇಸಿಗೆಯಲ್ಲಿ ಅಡ್ಡಾಡುವುದೇ ಆಹ್ಲಾದಕರ ಅನುಭವ.

■ **ದಿನೇಶ ಪಟವರ್ಧನ್**

ಚಿತ್ರಗಳು: ಅಶ್ವಿನಿ ಕುಮಾರ್ ಭಟ್

ಮೊದಲಿಗೇ ಹೇಳಿಬಿಡುತ್ತೇನೆ. ಬೆಳಿಗ್ಗೆ ಬಂದು ಸಂಜೆ ವಾಪಸಾಗುತ್ತೇನೆ ಎಂದು ಚಿಕ್ಕಮಗಳೂರಿಗೆ ಬರಲೇಬೇಡಿ. ಬಿರುಬೇಸಿಗೆಯಲ್ಲಿ ಒಣಗಿದ ಬಾಯಿಗೆ ಐಸ್‌ಕ್ರೀಮ್ ತೋರಿಸಿ ಕೊನೆಗೆ ಅದರ ಮೇಲಿನ ಚೆರ್ರಿ ಹಣ್ಣನ್ನಷ್ಟೇ ಕೊಟ್ಟು ಮುಂದಕ್ಕೆ ಹೋಗಿಬಿಟ್ಟರೆ ಹೇಗಿರುತ್ತದೆ? ಒಂದು ದಿನದಲ್ಲಿ ಚಿಕ್ಕಮಗಳೂರಿಗೆ ಬಂದರೆ ಅಂಥದ್ದೇ ಅನುಭವ ನಿಮ್ಮದಾಗುತ್ತದೆ. ಯಾವುದೋ ಒಂದು ಸ್ಥಳವನ್ನು ನೋಡಿ ವಾಪಸಾಗುವ ನಿಮ್ಮನ್ನು 'ಐಸ್‌ಕ್ರೀಮ್ ಅಬೀ ಬಾಕೀ ಹೈ' ಎಂದು ಜಿಲ್ಲೆ ಕರೆಯುತ್ತಿರುತ್ತದೆ.

ಕನಿಷ್ಠ ಎರಡು ದಿನ ಬಿಡುವುದು ಮಾಡಿಕೊಂಡು ಬನ್ನಿ. ಇಲ್ಲಿನ ಪ್ರಕೃತಿ ಸಿರಿವಂತಿಕೆಯ ಹಲವು ಜಾಗಗಳನ್ನು ಮನಸಲ್ಲಿ ತುಂಬಿಕೊಂಡು ಹೊಸ ಹುರುಪಿನೊಂದಿಗೆ ವಾಪಸಾಗಿ.

## ಎಲ್ಲೆಲ್ಲಿಗೆ ಹೋಗಬಹುದು?

ಮುಖ್ಯವಾಗಿ ಚಿಕ್ಕಮಗಳೂರನ್ನು ಕೇಂದ್ರವಾಗಿಟ್ಟುಕೊಂಡು ಎರಡು ದಿನದ ತಿರುಗಾಟದ ಯೋಜನೆಯನ್ನು ರೂಪಿಸಿಕೊಂಡರೆ ಒಳಿತು. ಮೊದಲ ದಿನ ಜಿಲ್ಲಾಕೇಂದ್ರದಿಂದ ಮುಳ್ಳಯ್ಯನ ಗಿರಿ, ಹೊನ್ನಮ್ಮನಹಳ್ಳ, ಸಗೀರ್ ಝುರಿ ಜಲಧಾರೆ, ಬಾಬಾಬುಡನ್‌ಗಿರಿ, ಮಾಣಿಕ್ಯಧಾರಗೆ ಹೋಗಿ ಬರಬಹುದು.

ಮುಳ್ಳಯ್ಯನಗಿರಿಯಿಂದ ಬಾಬಾಬುಡನ್‌ಗಿರಿಗೆ ತೆರಳಲು ಮತ್ತೆ ಜಿಲ್ಲಾಕೇಂದ್ರಕ್ಕೆ ಬರಬೇಕಾಗಿಲ್ಲ. ಹೋದ ಮಾರ್ಗದಲ್ಲಿಯೇ 8 ಕಿ.ಮೀ. ಹಿಂದಿರುಗಿ ಅಲ್ಲಿ ಎಡಕ್ಕೆ ಸಾಗುವ ರಸ್ತೆಯಲ್ಲಿ ಪಯಣ ಮುಂದುವರೆಸಿ. ರಸ್ತೆ ಅಂಚಿನಲ್ಲೇ ಹೊನ್ನಮ್ಮನ ಹಳ್ಳ ಇದೆ. ಅದನ್ನು ಆಸ್ವಾದಿಸಿ ಮುಂದೆ ಸಾಗಿ. ಸಗೀರ್ ಜಲಪಾತ ನಿಮ್ಮನ್ನು ಎದುರುಗೊಳ್ಳುವ ಉತ್ಸುಕತೆಯಲ್ಲಿ ಧಾರೆಯಾಗಿ ಧುಮ್ಮಿಕ್ಕುತ್ತಿರುತ್ತದೆ. ಸಗೀರ್ ಜಲಪಾತಕ್ಕೆ ಜಿಲ್ಲಾಡಳಿತ ನಿಗದಿಪಡಿಸಿದ ದರ (ಒಂದು ಜೀಪಿಗೆ ₹ 700. ಆರೇಳು ಜನ ಪ್ರಯಾಣಿಸಬಹುದು) ಕೊಟ್ಟು ಖಾಸಗಿ ಜೀಪ್‌ಗಳಲ್ಲಿ ಸಾಗಬೇಕು. ಬಾಬಾಬುಡನ್‌ಗಿರಿಯಿಂದ ಮಾಣಿಕ್ಯಧಾರಕ್ಕೆ ಇರುವ ಅಂತರ 4 ಕಿ.ಮೀ. ಇದು ಹಸಿರ ವನಸಿರಿಯ ನಡುವೆ ವರ್ಷಪೂರ್ತಿ ಧುಮ್ಮಿಕ್ಕುವ ಜಲಧಾರೆ. ಚಿಕ್ಕಮಗಳೂರು ಸಮೀಪದ ಹಿರೇಮಗಳೂರು, ಬೆಳವಾಡಿಯ ವೀರನಾರಾಯಣ ದೇಗುಲವನ್ನೂ ನೋಡಿಕೊಂಡು ಬರಬಹುದು.

ಇಷ್ಟು ಸ್ಥಳಗಳನ್ನು ನೋಡಿ ಜಿಲ್ಲಾಕೇಂದ್ರಕ್ಕೆ ಬಂದು ವಾಸ್ತವ್ಯ ಹೂಡಿ ಮರುದಿನ ಹೊರನಾಡು–ಶೃಂಗೇರಿಗಳಿಗೆ ಅಥವಾ ಕೆಮ್ಮಣ್ಣುಗುಂಡಿಗೆ ಹೋಗುವುದು ಉತ್ತಮ. ಪೂರ್ವಾನುಮತಿ ಪಡೆದಿದ್ದರೆ ಹೊನ್ನಮ್ಮನಹಳ್ಳದಿಂದ ಅನತಿ ದೂರದಲ್ಲಿ ಬಲಕ್ಕೆ ತಿರುಗಿ ಕಾಫಿ ತೋಟಗಳ ಮಧ್ಯೆ ಸಾಗುವ ಅಂಕುಡೊಂಕಿನ ಹಾದಿಯಲ್ಲಿ ಭದ್ರಾ ಅಭಯಾರಣ್ಯಕ್ಕೂ ಹೋಗಿ ತಂಗಬಹುದು.

ಕೆಮ್ಮಣ್ಣುಗುಂಡಿಗೆ ಹೋಗಲು ಇಚ್ಛಿಸುವವರು ಕೈಮರ ಬಳಿ ಎಡಕ್ಕೆ ತಿರುಗಿ ಸಂತವೇರಿ ಮಾರ್ಗವಾಗಿ ಹೋಗಿ ವಾಸ್ತವ್ಯ ಹೂಡಬಹುದು. ಜಿಲ್ಲಾ ಕೇಂದ್ರದಲ್ಲಿ ವಾಸ್ತವ್ಯ ಮಾಡುವವರು ಬಯಸಿದಲ್ಲಿ ಮರುದಿನ ಭದ್ರಾ ಅಭಯಾರಣ್ಯಕ್ಕೆ (ಅರಣ್ಯ ಇಲಾಖೆ ಅನುಮತಿ ಅಗತ್ಯ) ಹೋಗಬಹುದು. ಅಲ್ಲಿಂದ

